# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಧಾರವಾಡ

## ಎಸ್.ಸಿ. ಸಂಖ್ಯೆ: 1/2020

ಅ.ಸಾ. 04

ದೊ.ಸಾ. 06

| | | |
|---|---|---|
| ಸಾಕ್ಷಿಯ ಹೆಸರು | : | ಶಿವಾನಂದ ಅಲಿಯಾಸ್ ಶಿವಪ್ಪ ನವಲೂರ |
| ತಂದೆ ಹೆಸರು | : | ಯಲ್ಲಪ್ಪ |
| ವಯಸ್ಸು | : | 37 ವರ್ಷ |
| ಉದ್ಯೋಗ | : | ಸಿಪಾಯಿ, ಹಂಗರಕಿ ಗ್ರಾಮ ಪಂಚಾಯತಿ |
| ವಾಸಸ್ಥಳ | : | ಹಂಗರಕಿ |
| ಸತ್ಯ ಪ್ರತಿಜ್ಞೆ ಮೇರೆಗೆ, ದಿನಾಂಕ | : | 07/10/2021 |

**ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದ:**

2006 ರಿಂದ ನಾನು ಹಂಗರಕಿ ಗ್ರಾಮ ಪಂಚಾಯತಿಯಲ್ಲಿ ಸಿಪಾಯಿಯಾಗಿ ಕೆಲಸ ಮಾಡುತ್ತಿದ್ದೇನೆ.

2. ಸುಮಾರು ಮೂರು ವರ್ಷಗಳ ಹಿಂದೆ ನಾನು ಕಚೇರಿಗೆ ಬಂದು ನಂತರ ನೀರು ಬಿಡಲು ಹೋಗಿ ಮದ್ಯಾಹ್ನ 4.00 ಗಂಟೆಗೆ ಬಂದಾಗ ನಮ್ಮ ಪಂಚಾಯತಿ ಕಚೇರಿಯಲ್ಲಿ ಶಾರ್ಟ್ ಸರ್ಕಿಟ್ ಆಗಿ ಬೆಂಕಿ ಅನಾಹುತ ಆಗಿತ್ತು ಎಂದು ಪಿಡಿಓ ನನಗೆ ಹೇಳಿದ್ದಾರೆ. ಕೆಲವು ಕಾಗದಪತ್ರಗಳು ಸುಟ್ಟಿದ್ದಾವೆಂದು ನನಗೆ ಪಿಡಿಓ ಹೇಳಿದ್ದಾರೆ. ಆನಂತರ ಪೊಲೀಸರು ಮತ್ತು ಪಿಡಿಓ ಬಂದು ನೋಡಿದಾಗ ದಾಖಲೆಗಳು ಸುಟ್ಟಿದ್ದವು ಎಂದು ಹೇಳಿದ್ದಾರೆ. ಪೊಲೀಸರು ನನ್ನನ್ನು ಸಾಕ್ಷಿಯೆಂದು ವಿಚಾರಣೆ ಮಾಡಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟಿಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಸಾಕ್ಷಿ ಅಭಿಯೋಜನೆ ಪ್ರಕರಣಕ್ಕೆ ಸಾಕ್ಷಿದಾರನಾಗಿದ್ದು ಮುಖ್ಯವಿಚಾರಣೆಯಲ್ಲಿ ನಿರಾಕರಿಸಿದ ಕಾರಣ ಪಾಟಿಸವಾಲು ಮಾಡಲು ಅನುಮತಿ ನೀಡಲಾಗಿದೆ).**

ಎಸ್.ಸಿ. ಸಂಖ್ಯೆ.1/2020

ಅ.ಸಾ. 04

**ಪಾಟೀಸವಾಲು ಅಭಿಯೋಜನೆ ಪರವಾಗಿಃ**

3. ದಿಃ 15/02/2018 ರಂದು ಮುಂಜಾನೆ ಅಡಿಟ್ ಮಾಡಲು ಬರುತ್ತಾರೆ ಎಂದು ನಾವು ಆಫೀಸಿಗೆ ಬೇಗನೆ ಬಂದು ಅಡಿಟ್ ಫೈಲುಗಳನ್ನು ಹೊಂದಿಸಿ ಇಟ್ಟು, ಚಹಾ ಕುಡಿಯಲು ನಾನು ಮತ್ತು ಸಿಬ್ಬಂದಿ ಜನರು ಹೋದೆವು ಹಾಗೂ ನಾವು ಚಹಾ ಕುಡಿದು ಮರಳಿ ಆಫೀಸ್ ಗೆ ಬರುತ್ತಿರುವಾಗ ಆಫೀಸಿನ ಗೇಟಿನ ಹತ್ತಿರ ಇದ್ದಾಗ ಆರೋಪಿ ಯಾವುದೋ ದುರುದ್ದೇಶದಿಂದ ಕಂಪೌಂಡ್ ಹಾರಿ ಮಹತ್ವದ ಫೈಲುಗಳನ್ನು ಮತ್ತು ರಜಿಸ್ಟರ್ ಗಳನ್ನು ವರಾಂಡ್ ದಲ್ಲಿ ಹಾಕಿ ಬೆಂಕಿ ಹಚ್ಚಿ ಓಡಿ ಹೋದ, ಆಗ ಬೆಳಿಗ್ಗೆ 10.45 ಗಂಟೆಯಾಗಿತ್ತು ಎಂದು ನಾನು ಪೊಲೀಸರಿಗೆ ಹೇಳಿಕೆ ಕೊಟ್ಟಿಲ್ಲ. ನಾವೆಲ್ಲರೂ ಸದರಿ ಬೆಂಕಿಗೆ ನೀರು ಉಗ್ಗಿ, ಆರಿಸಿ ನೋಡಿದಾಗ ಕಾಗದಪತ್ರಗಳು ಅರ್ಧಮರ್ಧ ಸುಟ್ಟು ಹೋಗಿದ್ದವು, ಅವುಗಳನ್ನು ಹೊಂದಿಸಿ ರಟ್ಟಿನ ಬಾಕ್ಸಿನಲ್ಲಿಟ್ಟು, ಪಿಡಿಓ ಮತ್ತು ಪಂಚಾಯತಿ ಅಧ್ಯಕ್ಷರಿಗೆ, ಉಪಾಧ್ಯಕ್ಷರಿಗೆ ಮತ್ತು ಸದಸ್ಯರಿಗೆ ತಿಳಿಸಿದೆವು ಅನ್ನುವುದು ಸರಿಯಲ್ಲ. ಪೊಲೀಸರು ವಿಚಾರಣೆ ಕಾಲಕ್ಕೆ ಈಗ ನನಗೆ ಓದಿ ತೋರಿಸಿದಂತೆ ನಿಪಿ.5 ರಂತೆ ಹೇಳಿಕೆ ಕೊಟ್ಟಿದ್ದೇನೆ ಅನ್ನುವುದು ಸರಿಯಲ್ಲ. ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅನ್ನುವದು ಸರಿಯಲ್ಲ.

**ಪಾಟೀಸವಾಲು ಆರೋಪಿ ಪರವಾಗಿ ಶ್ರೀ.ಎನ್ ಹೆಚ್ ಟಿ ವಕೀಲರಿಂದಃ**

4. ಇಲ್ಲವೆಂದು ಹೇಳುತ್ತಾರೆ.

**ಮರುವಿಚಾರಣೆಃ** ಇಲ್ಲ.

(ಈ ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಉಕ್ತ ಹೇಳಿಕೆಯ ಮೇರೆಗೆ ಗಣಕೀಕೃತ ಮಾಡಿಸಲಾಯಿತು).

ಓ. ಹೇ. ಕೇ. ಸರಿ ಇದೆ.

Sd/-

07/10/2021

(**ಉಮೇಶ ಎಂ ಅಡಿಗ**)

ಪ್ರಧಾನ ಜಿಲ್ಲಾ ಹಾಗೂ ಸತ್ರ ನ್ಯಾಯಾಧೀಶರು,

ಧಾರವಾಡ.